ಇ) ವರದಿಯ ಪ್ರಮುಖ ಶಿಫಾರಸ್ಸುಗಳು :

1. ವೈದ್ಯರುಗಳ ಉದ್ಯೋಗಾವಕಾಶಗಳು, ವೈದ್ಯಕೀಯ ಪ್ರಾಕ್ಟೀಷನರ್ಸ್ ಇವರ ಆರ್ಥಿಕ ಸ್ಥಿತಿ ಇವುಗಳನ್ನು ಸತತವಾಗಿ ಅಭ್ಯಸಿಸಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲು ರಾಜ್ಯಮಟ್ಟದ ಸಮಿತಿಯನ್ನು ರಚಿಸುವುದು.

2. ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲಿ (ಮಾಹೆ ಮತ್ತು ಸೈಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಹೊಸತುಪಡಿಸಿ) ಒಟ್ಟು ಪ್ರವೇಶ ಮಿತಿಯನ್ನು 3000ಕ್ಕೆ ಮಿತಿಗೊಳಿಸುವುದು.

3. ಪ್ರಸ್ತುತ ವೈದ್ಯಕೀಯ ಕಾಲೇಜುಗಳು ಇಲ್ಲದೇ ಇರುವ ಪ್ರದೇಶಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದು. ಬೆಂಗಳೂರು ನಗರ ಮತ್ತು ವೈದ್ಯಕೀಯ ಕಾಲೇಜುಗಳನ್ನು ಹೊಂದಿರುವ ಪ್ರದೇಶಗಳಿಗೆ ಹೊಸ ವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡದೇ ಇರುವುದು.

4. ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವಾಗ ಅಥವಾ ಕಾಲೇಜಿನ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವಾಗ ಸರ್ಕಾರವು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆರೋಗ್ಯ ಅಭಿವೃದ್ಧಿ ಸಂಸ್ಥೆಗೆ ವಿಶ್ವಬ್ಯಾಂಕ್ ನೆರವು

1021 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಆರೋಗ್ಯ ಅಭಿವೃದ್ಧಿ ಸಂಸ್ಥೆಗೆ ವಿಶ್ವಬ್ಯಾಂಕ್ ಮತ್ತು ಇತರೆ ರಾಷ್ಟ್ರಗಳ ಸಹಾಯಧನ ಮತ್ತು ಸಾಲ ದೊರೆತಿದೆಯೇ?

ಆ) ದೊರೆತಿದ್ದರೆ ಎಷ್ಟು ಮೊತ್ತದ ಸಹಾಯ ಧನ ಮತ್ತು ಸಾಲವನ್ನು ಯಾವ ಯಾವ ರಾಷ್ಟ್ರಗಳಿಂದ ಪಡೆಯಲಾಗಿದೆ?

ಇ) ಸಾಲದ ಹಣಕ್ಕೆ ಬಡ್ಡಿ ದರ ಎಷ್ಟು? ಹಾಗೂ ಮರಪಾವತಿ ಅವಧಿಯೆಷ್ಟು?

ಈ) ಈ ಯೋಜನೆಯಡಿ ಬಂದ ಹಣವನ್ನು ಯಾವ ಯಾವ ಶೀರ್ಷಿಕೆಯಡಿ ಎಷ್ಟೆಷ್ಟು ಬಳಸಿಕೊಳ್ಳಲಾಗಿದೆ?

ಉ) ಯಾವ ಯಾವ ವೈದ್ಯಕೀಯ ಉಪಕರಣಗಳನ್ನು ಕೊಳ್ಳಲಾಗಿದೆ? ಯಾವ ಯಾವ ದರದಲ್ಲಿ ಕೊಳ್ಳಲಾಗಿದೆ?

ಊ) ಯಾವ ಯಾವ ಆಸ್ಪತ್ರೆಗಳಲ್ಲಿ ಈ ಉಪಕರಣಗಳನ್ನು ಬಳಸಲಾಗಿದೆ? ಎಲ್ಲವು ಸರಿಯಾಗಿ ಕೆಲಸ ನಿರ್ವಹಿಸುತ್ತಿದೆಯೇ? ಇಲ್ಲದಿದ್ದಲ್ಲಿ ನಿರ್ವಹಣೆಯ ಬಗ್ಗೆ ಸರ್ಕಾರವು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಕರ್ನಾಟಕ ಆರೋಗ್ಯ ಅಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ (1) ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆ, (2) ಕರ್ನಾಟಕ ದ್ವಿತೀಯ ಹಂತದ ಆಸ್ಪತ್ರೆಗಳ ಅಭಿವೃದ್ಧಿ (ಕೆಎಫ್‌ಡಬ್ಲ್ಯೂ) ಯೋಜನೆ ಹಾಗೂ (3) ಒಪೆಕ್ ಯೋಜನೆ ಬರುತ್ತದೆ. ಈ ಯೋಜನೆಗಳಿಗೆ ದೊರೆತ ಸಾಲ/ಸಹಾಯ ಧನ ವಿವರ ಈ ರೀತಿ ಇದೆ.

ಯೋಜನೆಯ ಹೆಸರು	ಸಾಲ/ಸಹಾಯ ಧನ ನೀಡುವ ದೇಶದ ಹೆಸರು	ಯೋಜನೆಯ ಒಟ್ಟು ಮೊತ್ತ	ಸಾಲ	ಸಹಾಯ ಧನ
1. ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆ	ವಿಶ್ವಬ್ಯಾಂಕ್	ರೂ. 545.80 ಕೋಟಿ	ರೂ. 447.56 ಕೋಟಿ	-
2. ಕರ್ನಾಟಕ ದ್ವಿತೀಯ ಹಂತದ ಆಸ್ಪತ್ರೆಗಳ ಅಭಿವೃದ್ಧಿ (ಕೆಎಫ್‌ಡಬ್ಲ್ಯೂ) ಯೋಜನೆ	ಜರ್ಮನ್ ದೇಶದ ಕೆಎಫ್‌ಡಬ್ಲ್ಯೂ ಸಂಸ್ಥೆ	ರೂ. 59.18 ಕೋಟಿ	-	ರೂ. 50.60 ಕೋಟಿ
3. ರಾಯಚೂರಿನ ಒಪೆಕ್ ಯೋಜನೆ	ತೈಲ ಉತ್ಪನ್ನ ರಾಷ್ಟ್ರಗಳ ಒಕ್ಕೂಟದ ಒಪೆಕ್ ಸಂಸ್ಥೆ	ರೂ. 29.25 ಕೋಟಿ	ರೂ. 20.48 ಕೋಟಿ	-

ಇ) ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯ ಸಾಲದ ಮೊತ್ತಕ್ಕೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶೇಕಡ 12.5 ಬಡ್ಡಿ ಕೊಡಬೇಕಾಗುವುದು ಹಾಗೂ 2006ನೇ ಸಾಲಿನಿಂದ 25 ವರ್ಷಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ. ಕರ್ನಾಟಕ ದ್ವಿತೀಯ ಹಂತದ ಆಸ್ಪತ್ರೆಗಳ ಅಭಿವೃದ್ಧಿ (ಕೆಎಫ್‌ಡಬ್ಲ್ಯೂ) ಯೋಜನೆಯಡಿ ನೆರವು ಅನುದಾನದ ರೂಪದಲ್ಲಿರುವುದರಿಂದ ಬಡ್ಡಿ ಮತ್ತು ಸಾಲ ಮರುಪಾವತಿ ಪ್ರಶ್ನೆ ಉದ್ಭವಿಸುವುದಿಲ್ಲ. ಒಪೆಕ್ ಸಂಸ್ಥೆಯ ಸಾಲಕ್ಕೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶೇಕಡ 12.5 ಬಡ್ಡಿ ಕೊಡಬೇಕಾಗಿದ್ದು. ಈ ಸಾಲ ಮರುಪಾವತಿಯ ಅವಧಿಯು 25 ವರ್ಷಗಳಾಗಿರುತ್ತದೆ.

ಈ) ವಿವರಣೆಯನ್ನು ಅನುಬಂಧ 1ರಲ್ಲಿ ನೀಡಿದೆ.

ಉ) ಅನುಬಂಧ 2ರಲ್ಲಿ ವಿವರಿಸಿದೆ.

ಊ) ಯೋಜನೆಗಳಡಿ ಬರುವ ಎಲ್ಲಾ ಆಸ್ಪತ್ರೆಗಳಿಗೂ ಅಗತ್ಯಕ್ಕನುಗುಣವಾಗಿ ಉಪಕರಣಗಳನ್ನು ಒದಗಿಸಲಾಗಿದೆ. (ಅನುಬಂಧ 3 ಲಗತ್ತಿಸಿದೆ) ಈ ಎಲ್ಲಾ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಸರ್ವೋತೋಪರಿ ಪ್ರಯತ್ನ ಮಾಡಲಾಗುತ್ತಿದೆ. ಈ ಉಪಕರಣಗಳ ನಿರ್ವಹಣೆ ಹಾಗೂ ದುರಸ್ತಿಯು ನಿರಂತರವಾದ ಕೆಲಸವಾದ್ದರಿಂದ 20 ಜಿಲ್ಲಾ ಮಟ್ಟದ ಉಪಕರಣ ದುರಸ್ತಿ ಕಾರ್ಯಾಗಾರಗಳನ್ನು ಸಹಾ ಸ್ಥಾಪಿಸಲಾಗಿದೆ.

ಜಯನಗರ ಸಾರ್ವಜನಿಕ ಗ್ರಂಥಾಲಯಕ್ಕೆ ಹೆಚ್ಚಿನ ಸೌಲಭ್ಯ

1022 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸೌತ್ ಎಂಡ್ ಬಳಿ ಇರತಕ್ಕ ಸಾರ್ವಜನಿಕ ಗ್ರಂಥಾಲಯದಲ್ಲಿ ಕಂಪ್ಯೂಟರ್ ಇಂಟರ್‌ನೆಟ್ ಹಾಗೂ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಹೊಸ ಹೊಸ ಪುಸ್ತಕಗಳನ್ನು ಒದಗಿಸಲಾಗಿದೆಯೇ?

ಆ) 1999-2000ನೇ ಸಾಲಿನಲ್ಲಿ ಈ ಗ್ರಂಥಾಲಯಕ್ಕೆ ಹೊಸ ಪುಸ್ತಕಗಳನ್ನು ಖರೀದಿಸಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಇ) ಈ ಗ್ರಂಥಾಲಯವನ್ನು ಅಭಿವೃದ್ಧಿಗೊಳಿಸಲು ಖಾಸಗಿ ಸಂಸ್ಥೆಗಳಿಂದ ದೇಣಿ ವಸೂಲಿ ಮಾಡಲು ಸರ್ಕಾರ ಆಲೋಚಿಸುತ್ತಿದೆಯೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಂಟರ್‌ನೆಟನ್ನು ಹೊರತುಪಡಿಸಿ, ಕಂಪ್ಯೂಟರನ್ನು ಅಳವಡಿಸಿದೆ. ಹಾಗೂ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಆಯ್ಕೆ ಪಟ್ಟಿಯನುಸಾರ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಹೊಸ ಪುಸ್ತಕಗಳನ್ನು ಒದಗಿಸಿದೆ.

ಆ) ದಕ್ಷಿಣವಲಯ ನಗರ ಕೇಂದ್ರ ಗ್ರಂಥಾಲಯಕ್ಕೆ ಹಂಚಿಕೆಯಾದ 35.00 ಲಕ್ಷ ರೂ. ಹಣದಲ್ಲಿ 4.00 ಲಕ್ಷವನ್ನು (ಹೊಸ ಪುಸ್ತಕ ಖರೀದಿಗೆ) ಜಯನಗರ ಗ್ರಂಥಾಲಯಕ್ಕೆ ಬಿಡುಗಡೆ ಮಾಡಲಾಗಿದೆ.

ಇ) ಹೌದು.

ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸುವುದು

1024 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯೊಳಗೆ ಬರುತ್ತದೆಯೇ?